ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು

**ಮುಂದುವರೆದ** ಪಾಟೀ ಸವಾಲುಃ- ಶ್ರೀ. ಪಿ.ಎಂ. ವಕೀಲರಿಂದ ಆರೋಪಿಯ ಪರವಾಗಿ

11. ನಾನು ಯಾವುದೇ ಸಾಲ ಹೊಂದಿರುವುದಿಲ್ಲ. ಖಾತೆಯಲ್ಲಿ ಸಾಕಷ್ಟು ಹಣ ಇಲ್ಲ ಹಾಗೂ ಸಹಿಯಲ್ಲಿ ವ್ಯತ್ಯಾಸ ಇದೆ ಎಂಬ ಕಾರಣಕ್ಕೆ ಚೆಕ್ಕು ಅಮಾನ್ಯಗೊಂಡಿರುತ್ತದೆ. ನಾನು ಮತ್ತು ಆರೋಪಿ ಆಶಾ ಎಂಗಸ್ಟರ್ ಕ್ಲಬ್ ನಲ್ಲಿ ಸದಸ್ಯರಾಗಿದ್ದೇವು. ನನ್ನ ಮನೆ ಕುವೆಟ್ಟು ಗ್ರಾಮದಲ್ಲಿ ಇದೆ ಎಂದರೆ ಸರಿ. ಆರೋಪಿಯು ಬೆಳ್ತಂಗಡಿಯ ನಗರ ಪಂಚಾಯಿತಿ ವ್ಯಾಪ್ತಿಯಲ್ಲಿ ವಾಸ ಇದ್ದಾರೆ ಎಂದರೆ ಸರಿ. ಸದರಿ ಕ್ಲಬ್ ನ ಮುಖ್ಯ ಉದ್ದೇಶ ಸ್ಪೋರ್ಟ್ಸ್ ಹಾಗೂ ನಾಟಕ ಮಾಡುವುದು. ನಾನು ಈಗ ಸದರಿ ಕ್ಲಬ್ ನ ಉಪಾಧ್ಯಕ್ಷ. ಆರೋಪಿಯು ಸದಸ್ಯ. ಆ ಬಗ್ಗೆ ದಾಖಲಾತಿಯನ್ನು ಹಾಜರು ಪಡಿಸಲು ಆಗುವುದಿಲ್ಲ. ಸಾಕ್ಷಿ ಮುಂದುವರೆದು ಹಾಜರು ಪಡಿಸಬಹುದು ಎಂದು ಹೇಳುತ್ತಾರೆ.

9. ಈ ಪ್ರಕರಣ ಅಲ್ಲದೇ ಈ ನ್ಯಾಯಾಲಯದಲ್ಲಿ ಇನ್ನೇರಡು ಪ್ರಕರಣಗಳು ದಾಖಲಿಸಿದ್ದೇ. ಸದರಿ ಎರಡು ಪ್ರಕರಣಗಳು ಖುಲಾಸೆಗೊಂಡಿರುತ್ತವೆ. ಸದರಿ ಪ್ರಕರಣಗಳ ಪೈಕಿ ಮುಸ್ತಾಫ್ ರವರ ವಿರುದ್ಧ ರೂ. 3,00,000/- ಕ್ಕೆ, ಸಿಯಾಬುದ್ದೀನ್ ರವರ ವಿರುದ್ಧ ರೂ. 2,00,000/- ಕ್ಕೆ ಪ್ರಕರಣ ದಾಖಲಿಸಿದ್ದೆ. ಮುಸ್ತಾಫ್ ರವರ ವಿರುದ್ಧ ರೂ. 6,00,000/- ಕ್ಕಲ್ಲ ಹಾಗೂ ಸಿಯಾಬುದ್ದೀನ ರವರ ವಿರುದ್ಧ ರೂ. 3,00,000/- ಕ್ಕೆ ಪ್ರಕರಣ ದಾಖಲಿಸಿದ್ದೆ, ಆದರೆ ಈಗ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

10. ಚೆಕ್ಕು ಅಮಾನ್ಯದ ಬಗ್ಗೆ ಆರೋಪಿಗೆ ನೋಟಿಸು ನೀಡುವಂತೆ ವಕೀಲರಿಗೆ ನಾನು ಮಾಹಿತಿ ನೀಡಿರುವುದಿಲ್ಲ. ನಾನು ನನ್ನ ವಕೀಲರ ಮೂಲಕ ನೀಡಿದ ನೋಟಿಸಿಗೆ ಆರೋಪಿಯು ಅವರ ವಕೀಲರ ಮೂಲಕ ನೀಡಿದ ಉತ್ತರದ ಬಗ್ಗೆ ನನಗೆ ಮಾಹಿತಿ ಇರುವುದಿಲ್ಲ. ನಾನು ಸಹಃ ನನ್ನ ವಕೀಲರ ಮೂಲಕ ಆ ಬಗ್ಗೆ ಮಾಹಿತಿ ತಿಳಿದುಕೊಂಡಿದ್ದು, ನನಗೆ ತಿಳಿದಿರುವ ಮಾಹಿತಿಯ ಪ್ರಕಾರ ಆರೋಪಿಯು ಯಾವುದೇ ಉತ್ತರ ನೀಡಿಲ್ಲ. ನಿಪಿ 1(ಎ) ಹಾಗೂ ಆರೋಪಿ ಪರ ವಕೀಲರು ಸಲ್ಲಿಸಿರುವ ವಕಾಲತ್ ನ ಸಹಿಗಳಲ್ಲಿ ವ್ಯತ್ಯಾಸ ಇದೆ ಎಂದರೆ ನನಗೆ ಗೊತ್ತಿಲ್ಲ. ಅವೆರಡೂ

ಸಹಿಗಳಲ್ಲಿ ಸಂಪೂರ್ಣವಾಗಿ ವ್ಯತ್ಯಾಸ ಇದೆ ಎಂದರೆ ಸರಿಯಲ್ಲ. ಅದೇ ರೀತಿ ನಿಪಿ 1(ಎ) ಹಾಗೂ ನಿಪಿ 5 ರಲ್ಲಿರುವ ಸಹಿಗಳಲ್ಲಿಯೂ ಸಹಃ ವ್ಯತ್ಯಾಸ ಇದೆ ಎಂದರೆ ಸರಿಯಲ್ಲ.

11. ನಾನು ಸ್ವಂತ ವಾಹನವನ್ನು ಹೊಂದಿರುತ್ತೇನೆ. ನಾನು ದಿನಸಿ ವಸ್ತುಗಳನ್ನು ಲೈನ್ ಸೇಲ್ ಮಾಡುತ್ತೇನೆ. ಅವುಗಳನ್ನು ಮಂಗಳೂರಿನಲ್ಲಿ ಖರೀದಿಸಿ, ಆ ರೀತಿ ಲೈನ್ ಸೇಲ್ ಮಾಡುತ್ತೇನೆ. ದಿನಕ್ಕೆ ಸುಮಾರು 10 ಅಂಗಡಿಗಳಿಗೆ ಸಾಮಗ್ರಿಗಳನ್ನು ಪೂರೈಸುತ್ತೇನೆ. ಆ ರೀತಿ ಪೂರೈಕೆ ಮಾಡಿದಾಗ ಜಿ.ಎಸ್.ಟಿ. ಬಿಲ್ ಗಳನ್ನು ನೀಡುತ್ತೇನೆ. ಆ ಬಗ್ಗೆ ಪರವಾನಿಗೆ ಇರುತ್ತದೆ. ಸದರಿ ಪರವಾನಿಗೆಯನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಲು ಯಾವುದೇ ತೊಂದರೆ ಇಲ್ಲ. ನಾನು ಎರಡು ಜನ ಕೆಲಸಗಾರರನ್ನು ಹೊಂದಿರುತ್ತೇನೆ. ನನ್ನ ವಾಹನ ಖರೀದಿಸಲು ಸಾಲ ಮಾಡಿರುವುದಿಲ್ಲ. ನನಗೆ ತಿಂಗಳಿಗೆ ರೂ. 50,000/- ಆಧಾಯ ಇದೆ. ನಾನು ಲೈನ್ ಸೇಲ್ ಮಾಡಿದ ಹಣ ಪಡೆಯುವುದಿಲ್ಲ ಬದಲಾಗಿ ಅವರಿಂದ ವಸ್ತುಗಳನ್ನು ಖರೀದಿಸುತ್ತೇನೆ. ನಾನು ಮಾರಾಟ ಮಾಡಿದ ವಸ್ತುಗಳ ಮೊತ್ತಕ್ಕೆ ಪುನಃ ಸರಕುಗಳನ್ನು ಖರೀದಿಸುತ್ತೇನೆ.

12. 2023-24 ರಲ್ಲಿ ರೂ. 50,000/- ಕ್ಕೆ ಆಧಾಯ ತೆರಿಗೆ ಮಾಡಿರುತ್ತೇನೆ. ಅಷ್ಟೇ ಮೊತ್ತಕ್ಕೆ 2024-25 ರಲ್ಲಿ ಆಧಾಯ ತೆರಿಗೆ ಪಾವತಿಸಿರುತ್ತೇನೆ. ನಾನು ರಿಟರ್ನ್ಸ್ ಸಲ್ಲಿಸುವುದರ ಜೊತೆಗೆ ಆಧಾಯ ತೆರಿಗೆ ಪಾವತಿಸುತ್ತೇನೆ. ನನಗೆ ಒಂದು ಎಕರೆ ಕೃಷಿ ಇದೆ. ನಾನು ಕೃಷಿ ಹಾಗೂ ಲೈನ್ ಸೇಲ್ ವ್ಯವಹಾರವನ್ನು ಹೊರತು ಪಡಿಸಿ, ವಾಹನಗಳನ್ನು ಮಾರಾಟ ಮಾಡುವ ವ್ಯವಹಾರವನ್ನು ಮಾಡುತ್ತೇನೆ. ಕೃಷಿಯಿಂದ ರೂ. 2,00,000/- ಆಧಾಯ ಇದೆ. ವಾರ್ಷಿಕವಾಗಿ ಅಂದಾಜು 6 ಕ್ವಿಂಟಲ್ ಅಡಿಕೆ ಸಿಗುತ್ತದೆ. ಅಡಿಕೆಯನ್ನು ಹೊರತು ಪಡಿಸಿ ಬೇರೆ ಕೃಷಿ ಇಲ್ಲ. ಈಗ ಕ್ವಿಂಟಲ್ ಗೆ ರೂ. 4500/- ಬೆಲೆ ಇದೆ. ವಾರ್ಷಿಕವಾಗಿ ರೂ. 30,000/- ಕೃಷಿಗೆ ಖರ್ಚಾಗುತ್ತದೆ. ಅಡಿಕೆಯನ್ನು ನಾವೇ ಸುಲಿಯುತ್ತೇವೆ. ತಿಂಗಳಿಗೆ 4 ವಾಹನಗಳನ್ನು ಮಾರಾಟ ಮಾಡುತ್ತೇನೆ. ತಿಂಗಳಿಗೆ ಬ್ರೊಕರ್ ಕೆಲಸದಿಂದ ತಿಂಗಳಿಗೆ ರೂ. 10,000/- ಆಧಾಯ ಇದೆ.

13. ಆರೋಪಿಯ ಮನೆಗೆ ನಾನು 15 ಬಾರಿ ಬೇಟಿ ನೀಡಿರುತ್ತೇನೆ. ಆದರೆ ಆರೋಪಿಗೆ ಎಷ್ಟು ಜನ ಸಹೋದರ ಸಹೋದರಿಯರು ಎಂದು ನೆನಪಿಲ್ಲ. ಆರೋಪಿಯ ಮನೆಯಲ್ಲಿ ಆರೋಪಿಯ ಪತ್ನಿ, ಆತನ ಮಕ್ಕಳು, ಹಾಗೂ ತಂದೆ ತಾಯಿ

ವಾಸವಾಗಿದ್ದಾರೆ.

ಈ ಹಂತದಲ್ಲಿ ಮುಂದುವರೆದು ಪಾಟೀ ಸವಾಲಿಗಾಗಿ ಕಾಲಾವಕಾಶ ಕೋರಿದ್ದು, ಕಾಲಾವಕಾಶ ನೀಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ತಕ್ಕಂತೆ ಬೆರಳಚ್ಚು ಮಾಡಿಸಲಾಯಿತು)

ಸಹಿ/-

ಓ.ಹೇ.ಕೇ. ಸರಿ. ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ, ಬೆಳ್ತಂಗಡಿ